## ಕನ್ನಡ (KANNADA)

## (208)

## ಮೂಲ್ಯಾಂಕನ ಪತ್ರ–(I)

## Assignment-I

### ಪಾಠಗಳು 1 ರಿಂದ 10

**ಒಟ್ಟು ಅಂಕಗಳು : 25**

**ಸೂಚನೆ :** **1.** ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

**2.** ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರಿಸಿರಿ. **5**

(ಕ) 'ಭರತ ಭೂಮಿ ನನ್ನ ತಾಯಿ ಮತ್ತು ಬಿಡುತೆ ಗುಡಿಯ ಕಟ್ಟಲು' ಗಳಿಗಿರುವ ಸಾಮ್ಯತೆಯನ್ನು ಭಾವಾರ್ಥದೊಂದಿಗೆ ಚರ್ಚಿಸಿ.

(ಖ) ಕವಿಯು ತನ್ನ ಮಡದಿಯ ಅಗಲಿಕೆಯ ವೇದನೆಯನ್ನು ಯಾವ ರೀತಿ ಚಿತ್ರಿಸಿದ್ದಾರೆ.? **5**

(ಗ) 'ರಸವೇ ಜನನ ವಿರಸವೇ ಮರಣ ಸಮರಸವೇ ಜೀವನ' ಸಾರಾಂಶವನ್ನು ತರ್ಕ ಬದ್ದವಾಗಿ ವ್ಯಕ್ತ ಪಡಿಸಿರಿ.

ಪ್ರಶ್ನೆ 2. ಈ ಕೆಳಗಿನ ಮೂರರಲ್ಲಿ ಎರಡು ಪ್ರಶ್ನೆಗಳಿಗೆ **೬೦** ರಿಂದ **೮೦** ಪದಗಳಷ್ಟು ಉತ್ತರ ಬರೆಯಿರಿ.

(ಕ) ಸಮಾಜದ ಪಿಡುಗು ವರದಕ್ಷಿಣೆಯಿಂದ ಹೆಣ್ಣು ಮಕ್ಕಳು ಆಹುತಿಯಾಗುವುದನ್ನು ತಡೆಗಟ್ಟುವಲ್ಲಿ ಹೆಣ್ಣು ಮತ್ತು ಗಂಡಿನ ಪಾತ್ರವೇನು?

(ಖ) ಬೆಳಗಿನ ಜಾವದ ನಿದ್ರಾ ಭಂಗದ ಸನ್ನಿವೇಶಗಳನ್ನು ಕವಿಯು ಚಿತ್ರಿಸಿರುವ ಸನ್ನಿವೇಶಗಳೊಂದಿಗೆ ಚರ್ಚಿಸಿರಿ.

(ಗ) ದ. ರಾ. ಬೇಂದ್ರೆಯವರ ಜೀವನ, ಬರಹ, ವ್ಯಕ್ತಿತ್ವ ಪರಿಚಯ ಮಾಡಿಕೊಡಿ.

ಪ್ರಶ್ನೆ 3. 250 ಪದಗಳನ್ನು ಬಳಸಿ ಉತ್ತರಿಸಿರಿ. **5**

(೧) ಒಲಂಪಿಕ್ಸ್ ಆಟದಲ್ಲಿ ಫುಟ್ ಬಾಲ್ ಆಟದ ಮಾನ್ಯತೆ ಏನು? ಭಾರತದ ಫುಟ್‌ಬಾಲ್ ಪಟು ಕೆಂಪಯ್ಯನವರ ಜೀವನ ವ್ಯಕ್ತಿತ್ವವನ್ನು ನಿಮ್ಮದೇ ಆದ ಬರಹದಲ್ಲಿ ಪರಿಚಯಿಸಿ.

ಅಥವಾ

ಗಾದೆಗಳು ಮನುಷ್ಯನ ಜೀವನದಲ್ಲಿ ಎಂತಹ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ? ನಿಮಗೆ ತಿಳಿದಿರುವ ೫ ಗಾದೆಗಳನ್ನು ನಿಮ್ಮದೇ ಆದ ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ.

ಪ್ರಶ್ನೆ 4. 250 ಪದಗಳನ್ನು ಬಳಸಿ ಉತ್ತರಿಸಿರಿ. **5**

ನೀವು ಮಾಧ್ಯಮಿಕ ಶಾಲೆಯ ಶಿಕ್ಷಕ ಹುದ್ದೆಗೆ ಅರ್ಹತೆ ಪಡೆದಿರುವಿರಿ ಎಂದು ಭಾವಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಒಂದು ಅರ್ಜಿಯನ್ನು ಬರೆಯಿರಿ. ನಿಮ್ಮ ಎಲ್ಲಾ ಮಾಹಿತಿಯನ್ನು ಲಗತ್ತಿಸಿರಿ.

ಅಥವಾ

ಎಸ್‌ಬಿಐ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಲು ಒಂದು ಅರ್ಜಿಯನ್ನು ಬ್ಯಾಂಕಿನ ಮೇನೇಜರ್‌ಗೆ ಬರೆಯಿರಿ. ಅದಕ್ಕೆ ಬೇಕಾಗಿರುವ ಕೆಲವು ಮಾಹಿತಿಯನ್ನು ಪಟ್ಟಿ ಮಾಡಿ ಸೇರಿಸಿ. **5**

ಪ್ರಶ್ನೆ 5. ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮಹಾನ್ ದೇಶಭಕ್ತರ ಚಿತ್ರಪಟಗಳನ್ನು ಒಂದು ಪುಸ್ತಕದಲ್ಲಿ ಲಗತ್ತಿಸಿ. ಅವರ ವ್ಯಕ್ತಿತ್ವ, ಹೋರಾಟದ ಸ್ವರೂಪ, ದೇಶಭಕ್ತಿಯನ್ನು ಮತ್ತು ಅವರ ಬದುಕು, ಬರಹಗಳನ್ನು ಸಂಗ್ರಹಿಸಿ ಬರೆಯಿರಿ. (ಕರ್ನಾಟಕದ ೫ ದೇಶಭಕ್ತರ ಚಿತ್ರಪಟ ಲಗತ್ತಿಸಿರಿ) ಅವರ ಜೀವನ, ವ್ಯಕ್ತಿತ್ವ, ಹೋರಾಟದ ಸ್ವರೂಪವನ್ನು, ಬದುಕು ಬರಹಗಳನ್ನು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತಗೊಳಿಸಿ ಬರೆಯಿರಿ.

**ಕನ್ನಡ (KANNADA)**

**(208)**

**ಮೂಲ್ಯಾಂಕನ ಪತ್ರ–(II)**

Assignment-II

**(ಪಾಠಗಳು 11 ರಿಂದ 20 ವರೆಗೆ)**

**ಒಟ್ಟು ಅಂಕಗಳು : 25**

**ಸೂಚನೆ :** **1.** ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

**2.** ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರಿಸಿರಿ. **5**

(ಕ) 'ಸವಿತಾ ನಾಗಭೂಷಣರ' ದೃಷ್ಟಿಯಲ್ಲಿ ಕವಿತೆ ಹುಟ್ಟುವುದು ಎಲ್ಲೆಲ್ಲಿ? ಆದರೆ 'ನನ್ನ ಕವಿತೆ' ಎಂಬ ಕವನದಲ್ಲಿ ಕವಯಿತ್ರಿಯ ಕವಿತೆ– ಹುಟ್ಟಿದುದು ಅಸಾಧಾರಣ ಮೂಲದಿಂದ ಎಂಬ ಮಾತನ್ನು ನಿಮ್ಮ ವಾಕ್ಯಗಳಲ್ಲಿ ವಿವರಿಸಿರಿ.

(ಖ) 'ನಮ್ಮ ಮೇಷ್ಟ್ರು' ಎಂಬ ಪಾಠದ ಆಧಾರದ ಮೇಲೆ ಹಳ್ಳಿಯ ಶಾಲೆ ಮತ್ತು ಮೇಷ್ಟ್ರ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

(ಗ) 'ಇನ್ನೂರು ವರ್ಷಗಳಲ್ಲಿ ಆಗದ ಬದಲಾವಣೆ ಇಪ್ಪತ್ತು ವರ್ಷಗಳಲ್ಲಿ ಆಗಿ ಹೋಯ್ತು'. ಎಂಬ ಲೇಖಕರ ಹೇಳಿಕೆ (ಈಗಿನ ನನ್ನೂರು ಪಾಠದ ಆಧಾರದ ಮೇಲೆ) ಯಾವ ಯಾವ ಕ್ಷೇತ್ರಗಳಲ್ಲಿಯ ಬದಲಾವಣೆಗಳ ಬಗ್ಗೆ ಹೇಳಿಕೆ ನೀಡುತ್ತದೆ?

ಪ್ರಶ್ನೆ 2. ಈ ಕೆಳಗಿನ ಮೂರರಲ್ಲಿ ಎರಡು ಪ್ರಶ್ನೆಗಳಿಗೆ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರ ಬರೆಯಿರಿ. **5**

(ಕ) 'ದೇವರ ದಾಸಿಮಯ್ಯ'ರ ದೃಷ್ಟಿಯಲ್ಲಿ 'ಕುನ್ನಿ'ಗಳು ಯಾರು? ಏಕೆ? ಮತ್ತು ದಾಸರ ದೃಷ್ಟಿಯಿಂದ ಈ ಜೀವಕ್ಕೆ ಯಾವ ಯಾವ ಚಿಂತೆಗಳು ಅಂಟಿಕೊಂಡಿವೆ? ಚಿಂತಾಮುಕ್ತರಾಗಲು ದಾಸರು ಸೂಚಿಸಿದ ಪರಿಹಾರವೇನು?

(ಖ) 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ'? ಎಂಬ ಗಾದೆಯನ್ನು ಕಲ್ಪಿತ ಕಥೆಯೊಂದರ ರಚನೆ ಮಾಡಿ ವಿವರಿಸಿರಿ.

ಅಂಶಗಳು:

i) ಬಾಲ್ಯದ ನಿರಂಕುಶ ಜೀವನ.

ii) ಎಳೆ ಮನಸ್ಸನ್ನು ಸರಿಮಾರ್ಗದಲ್ಲಿ ನಡೆಸುವಲ್ಲಿ ಪಾಲಕರ ಪಾತ್ರ.

iii) ನಿರಂಕುಶ ಮಗು ಬೆಳೆದು ತಪ್ಪುದಾರಿ ಹಿಡಿಯುವಿಕೆ.

iv) ನಂತರ ತಂದೆ ತಾಯಿಯರ ಬಾಳಿನ ಗೋಳು, ಪಾಶ್ಚಾತ್ತಾಪ.

v) ಎಳೆ ಜೀವನದಲ್ಲಿ ಶಿಸ್ತಿನ ಮಹತ್ವ.

(ಗ) ಕೆಳಗೆ ಕೊಟ್ಟಿರುವ ಪರಿಚ್ಛೇದವನ್ನು ಓದಿ ರೇಖಾಂಕಿತ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಮಕ್ಕಳು ದೇವರು ಕೊಟ್ಟ **ವರ.** ಪಾಲಕರು ಮತ್ತು ಶಿಕ್ಷಕರು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪೋಷಿಸಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಕೀಳರಿಮೆ, **ಹಿನ್ನಡೆ**ಯಿಂದಾಗಿ ಪ್ರತಿಭೆಯು ಎಲೆ ಮರೆಯ ಕಾಯಾಗಿದ್ದು ಪ್ರಕಟಗೊಳ್ಳದೇ ಕಮರಿಹೋಗುತ್ತದೆ. ತಂದೆ ತಾಯಿಗಳು ಮತ್ತು ಶಿಕ್ಷಕರು ಮಕ್ಕಳ ಪ್ರತಿಭೆಯನ್ನು **ಸೂಕ್ಷ್ಮವಾಗಿ** ಗಮನಿಸಿ ಸರಿಯಾಗಿ ಪ್ರೋತ್ಸಾಹ ನೀಡಿದರೆ ಮಕ್ಕಳು **ಉತ್ಸಾಹ** ದಿಂದ ಮುನ್ನುಗ್ಗುವುದರಲ್ಲಿ ಸಂಶಯವಿಲ್ಲ. ಮಕ್ಕಳೂ ಕೂಡ ಆಸಕ್ತಿಯಿಂದ ಪ್ರತಿಭೆಯನ್ನು **ವೃದ್ಧಿಸಿ**ಕೊಳ್ಳುತ್ತಾರೆ.

ಪ್ರಶ್ನೆ 3. ಸುಮಾರು **೨೫೦** ಶಬ್ದಗಳಲ್ಲಿ ಉತ್ತರಿಸಿರಿ. **5**

'ಮಾಸ್ಕೋ ಸರ್ಕಸ್' ಹಿನ್ನೆಲೆಯಲ್ಲಿ 'ದೇವರು ನಿಮ್ಮನ್ನೂ, ನನ್ನನ್ನೂ ಪಾರು ಮಾಡಿದ' ಎನ್ನುವ ಸ್ಥಿತಿಯಲ್ಲಿ ಯಾರು ಯಾರು ಯಾವ ಯಾವ ರೀತಿಯಲ್ಲಿ ಸಿಕ್ಕಿ ಪಾರಾದರು ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

ಅಥವಾ

ಕ್ಷೌರಿಕನ ತಪ್ಪಿಲ್ಲದಿದ್ದರೂ ಅವನಿಗೆ ಶಿಕ್ಷೆ ಏಕಾಯಿತು? ಈ ಕಥೆಯ ಔಚಿತ್ಯವನ್ನು ವರ್ತಮಾನ ಪ್ರಸಂಗದಲ್ಲಿಯೂ ಕಾಣಬಹುದೇ? ಅಧಿಕಾರದ ಸರಿಯಾದ ಬಳಕೆ ಈಗಲೂ ಕಾಣ ಬರುತ್ತದೆಯೇ? ವಿವರಿಸಿ.

ಪ್ರಶ್ನೆ 4. 250 ಶಬ್ದಗಳಿಗೆ ಮೀರದಂತೆ ಉತ್ತರಿಸಿರಿ. **5**

ವಿದ್ಯಾರ್ಥಿಗಳ ಮೇಲೆ ದೂರದರ್ಶನದ ಪ್ರಭಾವ ಕುರಿತು ನಿಬಂಧ ಬರೆಯಿರಿ.
ಅಂಶಗಳು:

i) ದೂರದರ್ಶನದ ವ್ಯಾಪಕತೆಯೊಂದಿಗೆ ಪ್ರಸ್ತಾವನೆ

ii) ವಿದ್ಯಾರ್ಥಿಗಳು ಅದನ್ನು ಸದುಪಯೋಗ/ದುರುಪಯೋಗ ಪಡಿಸಿಕೊಳ್ಳುವಿಕೆ

iii) ಸಮಾಜ ಸುಧಾರಣೆಯಲ್ಲಿ ದೂರದರ್ಶನ ಪ್ರಭಾವಿ ಮಾಧ್ಯಮ

iv) ಬುದ್ಧಿ ವಿಕಾಸಕ್ಕೆ ಇದು ಹೇಗೆ ಸಹಕಾರಿಯಾಗಿದೆ?

v) ಆಧುನಿಕ ಜೀವನದಲ್ಲಿ ದೂರದರ್ಶನದ ಅಭಾವದಿಂದ ದೂರ–ದೂರದ ಹಳ್ಳಿಗಳಲ್ಲಿ ವಿಕಾಸವು ಕುಂಠಿತವಾಗಿದೆಯೇ? ಎಂಬ ಬಗ್ಗೆ ಆಲೋಚನೆ.

vi) ಸದುಪಯೋಗದಿಂದ ಪರಿಣಾಮಕಾರಿ ಏಳ್ಗೆ, ಎಂದು ಉಪ ಸಂಹಾರ.

ಅಥವಾ

ಕೊಟ್ಟ ವಾಕ್ಯ ವೃಂದವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿರಿ.

ಕಲಿಯುಗದಲ್ಲಿ ಸುಳ್ಳು– ಮೋಸಕ್ಕೆ ಸುಖ ಸತ್ಯವನ್ನು ನಂಬಿದರೆ, ಸತ್ಯದಲ್ಲಿ ನಡೆದರೆ, ಬಾಳೆಲ್ಲ ಬೇವು ನೋವುಗಳಲ್ಲಿ ಬೇಯ ಬೇಕಾಗುತ್ತದೆ. ಎಂದು ಹೇಳುವವರನ್ನು ಇಂದು ಸಾಕಷ್ಟು ನೋಡುತ್ತಿದ್ದೇವೆ. ಆದರೆ ಇದು ಕ್ಷಣಿಕವಾದದ್ದು ಎಂಬುದನ್ನು ಕೇಳುತ್ತಿದ್ದೇವೆ. ಸುಳ್ಳು –ಮೋಸ –ವಂಚನೆಗಳ ಮಧ್ಯೆಯೂ ಸತ್ಯದ ಹಾದಿಯಲ್ಲಿ ನಡೆಯುವ ಸಜ್ಜನರನ್ನು, ಸತ್ಯವಂತರನ್ನು ಸಾವಿರಕ್ಕೊಬ್ಬ, ಲಕ್ಷ್ಯಕ್ಕೊಬ್ಬರನ್ನು ನೋಡಬಲ್ಲೆವು. ಸತ್ಯವೇ ದೇವರು, ಸತ್ಯವೇ ನಿತ್ಯಜೀವನದಲ್ಲಿ ಸುಖ–ಶಾಂತಿ–ನೆಮ್ಮದಿಯನ್ನು ನೀಡುತ್ತದೆ. ಎಂಬುದನ್ನು ಪಾಲಿಸುತ್ತಾ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರನ್ನು ನಾವು ನೋಡುತ್ತಿದ್ದೇವೆ. ಸತ್ಯವೆಂಬುದು ಮಾನವನ ಬಾಳಿಗೆ ದಾರಿದೀಪ. ಅದನ್ನು ಪಾಲಿಸಬೇಕಾದ್ದು ಪ್ರತಿಯೊಬ್ಬ ಮಾನವನ ಧರ್ಮ ಹಾಗೂ ಆದ್ಯಕರ್ತವ್ಯ. ಅದರ ಬೆಳಕಿನಲ್ಲಿ ನಡೆಯಬೇಕಾದ್ದೇ ಮಾನವ ಧರ್ಮ. ಕಳ್ಳತನ ಮಾಡುವವನಿಗೆ ಬೆಳಕು ಒಂದು ಅಡ್ಡಿ. ಕಳ್ಳನಿಗೆ ತನ್ನ ಕಾರ್ಯ ಸಾಧಿಸಬೇಕಾದರೆ ಕತ್ತಲೆಯೇ ಇರಬೇಕಾದ್ದು. ಆದರೆ ಸುತ್ತಲೂ ಕತ್ತಲೆ ಇದ್ದು ತನಗೆ ಎಷ್ಟುಬೇಕೋ ಅಷ್ಟು ಬೆಳಕನ್ನು ಪಡೆಯಲು ಕೈಯ್ಯಲ್ಲಿ ಒಂದು ಬ್ಯಾಟರಿಯನ್ನು ಹಿಡಿದಿರುತ್ತಾನೆ. ಆ ಬ್ಯಾಟರಿಯ ಬೆಳಕು ತಾತ್ಕಾಲಿಕವಾದದ್ದು. ಹೇಗೆ ಕಳ್ಳತನ ಸುಳ್ಳುಗಳನ್ನು ಮೋಸಗಾರರು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿ ಸತ್ಯದ ಹಾದಿ ತಪ್ಪಿ, ಅಸತ್ಯದ ದಾರಿಯಲ್ಲಿ ನಡೆದು **ತಮ್ಮ ಬಾಳಲ್ಲಿ ಕಲ್ಲು ಮುಳ್ಳುಗಳನ್ನು ಸೃಷ್ಟಿಸಿ ಕೊಳ್ಳುವುದಲ್ಲದೆ ಇತರರ ಬಾಳಲ್ಲಿಯೂ ಕಲ್ಲು ಮುಳ್ಳುಗಳನ್ನು ಚೆಲ್ಲುತ್ತಾರೆ.**

ಪ್ರಶ್ನೆಗಳು:

i) ಕಲಿಯುಗದಲ್ಲಿ ಸತ್ಯವಂತರ ಬಾಳು ಸಾಮಾನ್ಯವಾಗಿ ಹೇಗೆ ಸಾಗುತ್ತದೆ.?

ii) ಸತ್ಯವೇ ದೇವರು ಎಂದು ನಂಬದ ಜನ ಎಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುತ್ತಾರೆ?

iii) ರೇಖಾಂಕಿತ ವಾಕ್ಯಾಂಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

iv) ಈ ಪರಿಚ್ಛೇದಕ್ಕೆ ಸೂಕ್ತ ತಲೆಬರಹ ಕೊಡಿರಿ.

v) 'ಸುಖ' ಮತ್ತು 'ಸುಳ್ಳು' ಎಂಬ ಪದಗಳಿಗೆ ಸಜಾತಿಯ ಪದಗಳನ್ನು ಪರಿಚ್ಛೇದದಿಂದ ಆಯ್ದು ಬರೆಯಿರಿ.

ಪ್ರಶ್ನೆ 5. ಧೂಮ್ರಪಾನಕ್ಕೆ ಯುವ ಜನಾಂಗ ಬಲೆ ಬೀಳುವುದಕ್ಕೆ ಕಾರಣಗಳೇನು? ಪರಿಣಾಮಗಳಾವುವು? ಧೂಮ್ರಪಾನ ನಿಷೇಧಕ್ಕೆ ನಿಮ್ಮ ಸಲಹೆಗಳನ್ನು ಸೂಚಿಸಿ ವಿಸ್ತಾರವಾಗಿ ನಿಬಂಧ ಬರೆಯಿರಿ. ಕೆಲವು ಸಹಕಾರಿಯಾಗಬಲ್ಲ ಸೂಚನೆಗಳು. **5**

i) ವಿಷಯವನ್ನು ಕಥೆಯ ಅಥವಾ ಸಂಭಾಷಣೆಯ ಮೂಲಕ ಪ್ರಸ್ತುತ ಪಡಿಸುವುದು.

ii) ಇದರ ಕಾರಣ ಮತ್ತು ಪರಿಣಾಮಗಳ ವಿವರಣೆ

iii) ವ್ಯಕ್ತಿಗತ ಮತ್ತು ಪರಿಸರದ ಮೇಲೆ ಇದರ ದುಷ್ಪರಿಣಾಮ

iv) ನಿಮ್ಮ ಸಲಹೆಗಳೊಂದಿಗೆ ಉಹ ಸಂಹಾರ

v) ಈ ವಿಷಯಕ್ಕೆ ಸೂಕ್ತವಾದ ಜಾಹೀರಾತು, ಚಿತ್ರಗಳು, ಘೋಷಣೆಗಳನ್ನು ಸಂಗ್ರಹಿಸಿ ಲಗತ್ತಿಸಿರಿ.

**ಕನ್ನಡ (KANNADA)**

# (208)

**ಮೂಲ್ಯಾಂಕನ ಪತ್ರ–(III)**

Assignment-III

**(ಪಾಠಗಳು 21 ರಿಂದ 31 ವರೆಗೆ)**

**ಒಟ್ಟು ಅಂಕಗಳು : 25**

**ಸೂಚನೆ :** **1.** ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

**2.** ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರಿಸಿರಿ. **5**

(ಕ) ವೀರ ಮಹಿಳೆ ಚೆನ್ನಮ್ಮ ರಾಣಿಯು ಸಿಂಹದ ಮರಿಗಳಂತಿರುವ ಕನ್ನಡಿಗರಿಂದ ಯಾವ ಮಾನ ಅಪೇಕ್ಷೆ ವ್ಯಕ್ತಪಡಿಸಿದ್ದಾಳೆ?

(ಖ) ಮಾನವನ ಸ್ವಾರ್ಥದಿಂದ ಪ್ರಕೃತಿಯ ಮೇಲೆ ಮಾಡುವ ಅತ್ಯಾಚಾರಕ್ಕೆ ಎಣೆಯುಂಟೆ?
'ಹೊಲೆಗೆಡಿಸಿದ ಹಿಮಾಲಯ' ಎಂಬ ಪಾಠದ ಆಧಾರದ ಮೇಲೆ ಈ ವಾಕ್ಯಕ್ಕೆ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ಬರೆಯಿರಿ

(ಗ) ನಿಮ್ಮ ಪಾಠ್ಯದಲ್ಲಿ ಕೊಟ್ಟಿರುವ ತ್ರಿಪದಿಗಳಲ್ಲಿ ವ್ಯಕ್ತವಾದ ೧. ಗರತಿಯ ತೌರೂರಿನ ಹಂಬಲ ೨. ಸರ್ವಜ್ಞನ ದೃಷ್ಟಿಯಲ್ಲಿ ಸ್ವರ್ಗ, ನರಕ ಮತ್ತು ದೇವರು ಇವುಗಳನ್ನು ನಿಮ್ಮ ವಾಕ್ಯಗಳಲ್ಲಿ ವಿವರಿಸಿರಿ.

ಪ್ರಶ್ನೆ 2. ಯಾವುದೇ ಎರಡನ್ನು ಮಾತ್ರ ಉತ್ತರಿಸಿರಿ ನಿಮ್ಮ ಉತ್ತರ **೬೦** ರಿಂದ **೮೦** ಶಬ್ದಗಳಷ್ಟಿರಲಿ. **5**

(ಕ) 'ಮಂಡೋದರಿ' ಪಠ್ಯಭಾಗದ ಆಧಾರದ ಮೇಲೆ ಮಂಡೋದರಿಯ ವ್ಯಕ್ತಿತ್ವದ ಹಿರಿಮೆಯನ್ನು ನಿಮ್ಮ ವಾಕ್ಯಗಳಲ್ಲಿ ವಿವರಿಸಿರಿ.

(ಖ) ಕೌರವನ ಸೇನೆಯ ಮುತ್ತಿಗೆಯ ಬಗ್ಗೆ ಸೈನಿಕನು ಬಂದು ಹೇಳಿದಾಗ ಯುವತಿಯರ ಮುಖ ನೋಡುತ್ತ ನಿಂತ 'ಉತ್ತರನ' ವರ್ಣನೆಯನ್ನು ಕುಮಾರ ವ್ಯಾಸನು ಮನಸ್ಸಿನಲ್ಲಿ ಅಚ್ಚೊತ್ತಿದಂತೆ ವಿವರಿಸಿದ್ದನ್ನು ಸರಿಯಾದ ಭಾವನೆಯೊಂದಿಗೆ ನಿಮ್ಮ ವಾಕ್ಯಗಳಲ್ಲಿ ವಿವರಿಸಿರಿ.

(ಗ) 'ದಾನ ಚಿಂತಾಮಣಿ' ಯಲ್ಲಿ ಬರುವ ಅತ್ತಿಮಬ್ಬೆಯ ವ್ಯಕ್ತಿತ್ವದ ಹಿರಿಮೆಯನ್ನು ಕವಿಯು ಹೇಗೆ ಎತ್ತಿ ತೋರಿಸಿದ್ದಾನೆಂಬ ಬಗ್ಗೆ ವಿವರಿಸಿರಿ.

ಪ್ರಶ್ನೆ 3. ಸುಮಾರು 250 ಪದಗಳಲ್ಲಿ ಉತ್ತರಿಸಿರಿ. **5**

ಪಂಪನು ವರ್ಣಿಸಿದ ಬನವಾಸಿ ದೇಶ ಮತ್ತು ಕವಿಯ ಹಂಬಲ ಇವುಗಳ ವರ್ಣನೆಯನ್ನು ವಿವರವಾಗಿ ವಿಶದ ಪಡಿಸಿರಿ.

ಅಥವಾ

ಜೀವ–ಜಂತುಗಳಲ್ಲಿ ಕಾಣುವ ರಕ್ಷಣಾ ತಂತ್ರದ ವೈವಿಧ್ಯತೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

ಪ್ರಶ್ನೆ 4. ಭಾರತದಲ್ಲಿ ವರ್ಷವಿಡೀ ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ದೇಶದಾದ್ಯಂತ ಆಚರಿಸಲ್ಪಡುವ ದೊಡ್ಡ ಹಬ್ಬಗಳನ್ನು ಪಟ್ಟಿಮಾಡಿ ಅವುಗಳಲ್ಲಿ ಯಾವುದಾದರೂ ಒಂದು ಹಬ್ಬದ ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ಒಂದು ನಿಬಂಧ ಬರೆಯಿರಿ. **5**

(ಈ ಕೆಳಗಿನ ಪಟ್ಟಿಯ ಸಹಾಯ ಪಡೆಯಬಹುದು)

i) ಪ್ರಸ್ತಾವನೆ

ii) ಹಬ್ಬದ ಸಾಮಾಜಿಕ, ಸಾಂಸ್ಕೃತಿಕ ಮಹತ್ವ

iii) ಆಚರಿಸುವ ಬಗೆ

iv) ಪರಿಣಾಮಗಳು, ಪ್ರಯೋಜನಗಳು

v) ಹಬ್ಬದ ಆಚರಣೆಯ ಚಿತ್ರಗಳನ್ನು ಸಂಗ್ರಹಿಸಿ ಒಂದು ಚಾರ್ಟ್ ತಯಾರಿಸಿ

ಅಥವಾ

ಕ್ರಿಕೆಟ್ ಆಟಕ್ಕೆ ಮಹತ್ವ ದೊರಕುವಷ್ಟು ರಾಷ್ಟ್ರೀಯ ಕ್ರೀಡೆಯಾದ ಹಾಕಿಗೆ ದೊರಕುತ್ತಿಲ್ಲ ಎಂಬುದನ್ನು ಚರ್ಚಿಸುತ್ತಾ ನಿಮ್ಮ ಸ್ನೇಹಿತನಿಗೆ ಒಂದು ದೀರ್ಘವಾದ ಪತ್ರ ಬರೆಯಿರಿ. **5**

ಪ್ರಶ್ನೆ 5. ಮನುಷ್ಯನ ಜೀವನ ಅಮೂಲ್ಯವಾದದ್ದು. ಹಲವಾರು ಜನ್ಮದ ಪುಣ್ಯದ ಫಲ. ಮಾನವ ಜನ್ಮ, ಮಾನವ ಎಲ್ಲಾ ಜೀವ ಸಂಕುಲಗಳಿಗಿಂತ ಬುದ್ಧಿವಂತ. ತನ್ನ ಚಾಣಾಕ್ಷ ತನದಿಂದಲೇ ಜೀವ ಕುಲದಲ್ಲಿ ಉನ್ನತ ಸ್ಥಾನ ಪಡೆದಿದ್ದಾನೆ. ಅಂತಹ ಜನ್ಮವನ್ನು ಸ್ವಕೃತ್ಯದಿಂದ ಸ್ವತಹಾ ಹಾಳುಮಾಡಿಕೊಂಡರೆ ದುರಂತದ ಪರಮಾವದಿಯಲ್ಲದೆ ಬೇರೇನು? ಮಾದಕ ದ್ರವ್ಯ ಸೇವನೆ ಒಂದು ಭಯಂಕರವಾದ ಆತ್ಮಾಹುತಿಯಾಗುವಂತಹ ಕ್ರಿಯೆ.

ಇಂದಿನ ಯುವಕರು –ಪೀಳಿಗೆಯವರು ತಮ್ಮ ಅಧಿಕ ಕೆಲಸದ ಒತ್ತಡದಿಂದ ಪಲಾಯನ ಪ್ರವೃತ್ತಿಯಿಂದಾಗಿ ಮಾದಕ ದ್ರವ್ಯ ಸೇವನೆ ಮಾಡುತ್ತಾರೆ. ತಕ್ಷಣದ ತಾತ್ಕಾಲಿಕ ಸುಖಕ್ಕಾಗಿ ಜೀವನದ ಸುವರ್ಣ ಘಳಿಗೆಯನ್ನು ಹಾಳುಮಾಡುತ್ತಾರೆ. ಅದರಲ್ಲೂ ಸಣ್ಣವಯಸ್ಸಿನ ಮಕ್ಕಳು ಹೆಣ್ಣು ಮಕ್ಕಳು ಈ ಚಟಕ್ಕೆ ಬಲಿಯಾಗಿ ಜೀವ ಮಾನವನ್ನು ಅಂದಃಕಾರದಲ್ಲಿ ಕಳೆಯುತ್ತಾರೆ.

ಮಾದಕ ದ್ರವ್ಯವು ಜೈವಿಕ ಸಂಪತ್ತನ್ನು ಹಾಳುಮಾಡುವುದಲ್ಲದೆ ದೇಶದ ಬೆಳವಣಿಗೆಯನ್ನೇ ಕುಂಠಿತಗೊಳಿಸುತ್ತದೆ. ದೇಶಕ್ಕೆ ಯುವ ಜನತೆಯೇ ಬೆನ್ನೆಲುಬು ಅದೇ ಕುಂದಿದರೆ ಅನಾಹುತ ನಿಶ್ಚಿತ ವಾಗಿರುತ್ತದೆ. ಪ್ರತಿಯೊಬ್ಬ ಪ್ರಜೆಗೂ (ಪ್ರತಿಯೊಬ್ಬರಿಗೂ) ತಿಳಿದ ವಿಷಯ. ಮಾದಕ ದ್ರವ್ಯ ಹಾನಿಕಾರಕ ಎಂದು ತಿಳಿದರೂ ಈ ಪ್ರವೃತ್ತಿ ಪುನರಾವರ್ತನೆ ಆಗುತ್ತಿರುವುದೇಕೆ? ಹೊಲಗಳಲ್ಲಿ ರೈತರು ಸಹ ಮಾದಕ ದ್ರವ್ಯವನ್ನು ತಯಾರಿಸುವಲ್ಲಿ

ಬಳಸುವ ಗಿಡ ಮೂಲಿಕೆಗಳನ್ನು ಬೆಳೆಯುತ್ತಿದ್ದಾರೆ. ಅನ್ನ ನೀಡುವ ಭೂ ತಾಯಿಯಲ್ಲಿ ಅಫೀಮು, ಗಾಂಜಾಗಳಂತಹ ವಸ್ತುಗಳನ್ನು ಬೆಳೆದರೆ ಯಾರಿಗೆ ಹಾನಿಯಾಗುತ್ತದೆ. ಹಣದ ಆಸೆಯಿಂದ ಬೆಳೆದು ಹಲವಾರು ಮುಗ್ದ ಜನರ ಬಲಿ ತೆಗೆದು ಕೊಂಡರೆ ಮುಂದಿನ ಗತಿ ಏನು?

ಇಂತಹ ಮಾದಕ ದ್ರವ್ಯಗಳಿಂದಾಗುವ ಅನಾಹುತಗಳನ್ನು ಪಟ್ಟಿಮಾಡಿ ಕಾರಣಗಳನ್ನು ವಿಶ್ಲೇಷಿಸಿ ಮಾದಕ ದ್ರವ್ಯದ ವಿರುದ್ದ ಘೋಷಣೆಗಳನ್ನು ತಯಾರಿಸಿ ಮಾದಕ ದ್ರವ್ಯದಿಂದ ಉಂಟಾಗುವ ಪರಿಣಾಮಗಳನ್ನು ಚಿತ್ರಗಳೊಂದಿಗೆ ಲಗತ್ತಿಸಿರಿ ಕಿಶೋರಾವಸ್ತೆಯ ಮಕ್ಕಳು ಮೇಲಿನ ರೋಗದಂತಹ ಚಟಕ್ಕೆ ಏಕೆ ಹಾಗೂ ಹೇಗೆ ಒಳಗಾಗುತ್ತಿದ್ದಾರೆ ಎಂಬುದರ ಬಗ್ಗೆ ವಿವರಣೆ ನೀಡಿ.